ಪಿ .ಡಬ್ಲ್ಯೂ-1

ದಿನಾಂಕ 31-07-2024 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

**ಮುಂದುವರೆದ ಪಾಟೀಸವಾಲುಃ ಪ್ರತಿವಾದಿ ಪರ ಎಸ ಎ ಎಸ್ ವಕೀಲರಿಂದಃ-**

ಪಿರಾಜಿ ಕಲಾಲ ಇವರಿಗೆ 02 ಎಕರೆ 09 ಗುಂಟೆ ಜಮೀನನ್ನು 2001 ನೇ ಇಸ್ವೀಯಲ್ಲಿ ಖರೀದಿ ಕೊಟ್ಟಿರುತ್ತೇನೆ ಎಂದರೆ ಸರಿ . ಅದರ ದಾಖಲೆಯನ್ನು ಹಾಜರು ಪಡಿಸಿರುವದಿಲ್ಲ . ಸದರಿ ಖರೀದಿ ಪತ್ರಕ್ಕೆ ನನ್ನ ಸಹಿತ ವಾದಿ ನಂ 2 ರಿಂದ 6 ರವರು ಸಹಿ ಮಾಡಿರುತ್ತೇವೆ . ಜಮಖಂಡಿಯ ನೋಂದಣಿ ಕಚೇರಿಯಲ್ಲಿ ಸಹಿ ಮಾಡಿರುತ್ತೇವೆ . ಆಗ 3 ರಿಂದ 5 ನೇ ವಾದಿಯರು ಅಪ್ರಾಪ್ತ ವಯಸ್ಕರು ಇದ್ದರು ಎಂದರೆ ಸರಿ . ಅವರ ಪರವಾಗಿ ನಮ್ಮ ತಾಯಿಯಾದ 6 ನೇ ವಾದಿ ಸಹಿ ಮಾಡಿರುತ್ತಾರೆ ಎಂದರೆ ಸರಿ . ಸದರಿ ಖರೀದಿ ಪತ್ರ 23-07-2001 ರಂದು ಆಗಿರುತ್ತದೆ ಎಂದರೆ ಸರಿ . ಸದರಿ ಖರೀದಿ ಪತ್ರದಲ್ಲಿ ದಕ್ಷಿಣ ಭಾಗದ 02 ಎಕರೆ 09 ಗುಂಟೆ ಜಮೀನನ್ನು ಪಿರಾಜಿ ಕಲಾಲ ಇವರಿಗೆ ಖರೀದಿ ಕೊಟ್ಟಿರುತ್ತೇವೆ ಎಂದರೆ ಸರಿ. ಸದರಿ ಜಮೀನಿನ ಉತ್ತರಕ್ಕೆ 02 ಎಕರೆ 10 ಗುಂಟೆ ಜಮೀನನ್ನು ಚಂದ್ರಶೇಖರ ಬಡಿಗೇರ ಇವರಿಗೆ ಖರೀದಿ ಕೊಟ್ಟಿರುತ್ತೇವೆ ಎಂದು ಬರೆದಿದೆ ಎಂದರೆ ನಾನು ಖರೀದಿ ಕೊಟ್ಟಿರುವದಿಲ್ಲ . ನಾನು ಪಿರಾಜಿ ಕಲಾಲ ಇವರ ಖರೀದಿ ಪತ್ರವನ್ನು ನೋಡಿರುತ್ತೇನೆ . ಅದರಲ್ಲಿ ಏನು ಬರೆದಿದೆ ಎಂದು ಓದಿಸಿ ತಿಳಿದುಕೊಂಡಿರುತ್ತೇನೆ . ಸದರಿ ಖರೀದಿ ಪತ್ರದ ಚಕಬಂದಿಯಲ್ಲಿ ಉತ್ತರದ 02 ಎಕರೆ 10 ಗುಂಟೆ ಜಮೀನು ಚಂದ್ರಶೇಖರ ಇವರಿಗೆ ಖರೀದಿ ಕೊಟ್ಟಿರುವದು ತಪ್ಪಾಗಿದೆ ಎಂದು ಖರೀದಿ ಪತ್ರವನ್ನು ಎಲ್ಲಿಯು ಪ್ರಶ್ನಿಸಿರುವದಿಲ್ಲ . ದಿನಾಂಕ 23-07-2001 ರಂದು ಉತ್ತರದ 02 ಎಕರೆ 10 ಗುಂಟೆ ಜಮೀನು ಚಂದ್ರಶೇಖರ ಇವರಿಗೆ ಖರೀದಿ ಕೊಟ್ಟು 78 ಸಾವಿರ ಹಣವನ್ನು ಪಡೆದುಕೊಂಡಿದ್ದೇವೆ ಎಂದರೆ ಸರಿಯಲ್ಲ . ಸದರಿ ಖರೀದಿ ಪತ್ರದಲ್ಲಿ ದಕ್ಷಿಣದ ಚಕಬಂದಿಯಲ್ಲಿ ಪಿರಾಜಿ ಕಲಾಲ ಇವರಿಗೆ ಇದೇ ದಿನ ಖರೀದಿ ಕೊಟ್ಟಿರುತ್ತೇವೆಂದು ಬರೆದಿದೆ ಎಂದರೆ ಸರಿಯಲ್ಲ . ಸದರಿಯವರಿಗೆ ಆದ ಖರೀದಿ ಪತ್ರವನ್ನು ನಾನು ಹಾಜರು ಪಡಿಸಿರುತ್ತೇನೆ . ಅದರಲ್ಲಿ(ನಿಪಿ-4) ಏನು ಬರೆದಿದೆ ಎಂದು ಓದಿಸಿ ತಿಳಿದುಕೊಂಡಿರುತ್ತೇನೆ . ಸದರಿ ದಾಖಲೆಯಲ್ಲಿ ಚಕಬಂದಿ ಕುರಿತಾಗಿ ನಮೂದಾಗಿರುದನ್ನು ನನ್ನ ವಾದ ಪತ್ರ ಅಥವಾ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆಸಿರುವದಿಲ್ಲ .

ದಿನಾಂಕ 23-07-2001 ರಂದು 2 ನೇ ವಾದಿಗೆ ಹೆರಿಗೆ ಆಗಿತ್ತು ಎಂದು ತೋರಿಸಲು ದಾಖಲೆಗಳನ್ನು ಹಾಜರು ಪಡಿಸಿರುವದಿಲ್ಲ ಅದರೆ ಅವರಿಗೆ ಮಹಾಲಿಂಗಪೂರದ ಅವರಾದಿ ಆಸ್ಪತ್ರೆಯಲ್ಲಿ ಹೆರಿಗೆ ಆಗಿರುತ್ತದೆ . ಅದರ ದಾಖಲೆ ನನಗೆ ಸಿಕ್ಕಿರುವದಿಲ್ಲ . ಅದರ ದಾಖಲೆಗಳನ್ನು ಪಡೆಯಲು ನಾನು ಪ್ರಯತ್ನಿಸಿರುವದಿಲ್ಲ . ಸದರಿಯವರಿಗೆ ಆ ದಿನ ಹೆಣ್ಣು ಮಗು ಜನಿಸಿರುತ್ತದೆ .ಅದನ್ನು ತೋರಿಸಲು ದಾಖಲೆ ಸಿಗದ ಕಾರಣ ಹಾಜರು ಪಡಿಸಿರುವದಿಲ್ಲ . ಮಗುವಿನ ಜನನ ನೋಂದಣಿ ಮಾಡಿಸಿರುವದಿಲ್ಲ . ಸದರಿ ದಿನ 2 ನೇ ವಾದಿಗೆ ಹೆರಿಗೆ ಆಗಿದ್ದು ನಂತರ ಅವರು ನೋಂದಣಿ ಕಚೇರಿಯಲ್ಲಿ ಖರೀದಿ ಪತ್ರಗಳಿಗೆ ಸಹಿ ಮಾಡಿದ್ದರು ಸಹ ಅಕೆಯು ಸಹಿ ಮಾಡಿರುವದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ . ಪ್ರತಿವಾದಿಯ ಖರೀದಿ ಪತ್ರದಲ್ಲಿಯೂ ಸಹ ನನ್ನ, 2 ಮತ್ತು 6 ನೇ ವಾದಿಯರ ಸಹಿ ಇದ್ದರು ಸಹ ನಾವು

ಸಹಿ ಮಾಡಿರುವದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ . ಅದೇ ರೀತಿ ವಾದಿ ನಂಬರ 3 ರಿಂದ 5 ರವರು ಅಪ್ರಾಪ್ತರು ಇರುವ ಕಾರಣ ಅವರ ಪರವಾಗಿ ನಮ್ಮ ತಾಯಿಯಾದ 6 ನೇ ವಾದಿ ಸಹಿ ಮಾಡಿದ್ದರು ಅಕೆಯ ಸಹಿ ಇರುವದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ . ಚಂದ್ರ ಶೇಖರ ಇವರಿಗೆ ಖರೀದಿ ಪತ್ರ ಬರೆದುಕೊಟ್ಟು ಜಮೀನಿನ ಕಬ್ಜಾ ವನ್ನು ಅವರಿಗೆ ಕೊಟ್ಟಿದ್ದೇವೆ ಎಂದರೆ ಸರಿಯಲ್ಲ . ಅದರಂತೆ ಅಂದಿನಿಂದ ಇಲ್ಲಿಯವರಗೂ ಚಂದ್ರಶೇಖರ ಇವರು ಮತ್ತು ಅವರ ಮರಣ ನಂತರ ಆತನ ವಾರಸುದಾರರಾದ ಪ್ರತಿವಾದಿಯರು ಜಮೀನಿನ ಕಬ್ಜಾದಲ್ಲಿ ಇದ್ದಾರೆಂದರೆ ಸರಿಯಲ್ಲ . ಅಂದಿನಿಂದ ಜಮೀನಿನ ಕರ ವನ್ನು ಅವರೇ ಪಾವತಿ ಮಾಡುತ್ತಿದ್ದಾರೆಂದರೆ ಸರಿಯಲ್ಲ . ಸಾಕ್ಷಿ ಮುಂದುವರೆದು ಅವರು ಹೊಲ ಮಾಡಿಕೊಂಡು ಕರವನ್ನು ಅವರೇ ತುಂಬುತ್ತಿದ್ದಾರೆ . ನಾನು ಕರ ಪಾವತಿಸಿದ ಕುರಿತಾಗಿ ದಾಖಲೆಗಳನ್ನು ಹಾಜರು ಪಡಿಸಲು ಆಗುವದಿಲ್ಲ . ಪ್ರತಿವಾದಿಯರು ಜಮೀನು ಖರೀದಿ ಮಾಡಿ ಕರ ತುಂಬುತ್ತಿದ್ದಾರೆಂದರೆ ಸರಿಯಲ್ಲ . ಜಮೀನಿನ ಕಬ್ಜಾದಲ್ಲಿ ನಾವು ಇದ್ದೇವೆ ಎಂದು ತೋರಿಸಲು ದಾಖಲೆಗಳನ್ನು ಹಾಜರು ಪಡಿಸಿರುವದಿಲ್ಲ . ದಾವಾ ಆಸ್ತಿ ನಮ್ಮ ಕಬ್ಜಾದಲ್ಲಿ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ .

ಆರ್ ಟಿ ಎಸ್ ಅಪೀಲವನ್ನು ಕಂದಾಯ ನ್ಯಾಯಾಲಯದಲ್ಲಿ ಮಾಡಿದ್ದು ಅದನ್ನು ಸಿವಿಲ್ ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳಬೇಕೆಂದು ಆದೇಶ ಆಗಿರುತ್ತದೆ . ಅದರ ಆದೇಶವನ್ನು ಹಾಜರು ಪಡಿಸಿರುತ್ತೇನೆ .ಆರ್ ಟಿ ಎಸ್ ಅಪೀಲದಲ್ಲಿ ಕಂದಾಯ ನ್ಯಾಯಾಲಯದವರು ಸಿವಿಲ್ ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳಬೇಕೆಂದು ಆದೇಶ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ . ಪ್ರತಿವಾದಿ ತಮ್ಮ ಹೆಸರಿಗೆ ದಾವಾ ಜಮೀನನ್ನು ಸುಳ್ಳು ಖರೀದಿ ಮಾಡಿಕೊಂಡಿರುತ್ತಾರೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ . ಸದರಿಯವರು ಖರೀದಿ ಮಾಡಿದ ವಿಷಯ 2001 ರಿಂದ ನಮಗೆ ಗೊತ್ತಿದ್ದರೂ ಸಹ ಖರೀದಿ ಆಗಿರುವದಿಲ್ಲ ಎಂದು ಸುಳ್ಳು ದಾವೆ ಹುಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ .

ಮರು ವಿಚಾರಣೆಃ- ಇಲ್ಲಾ .

(ತೆರೆದ ನ್ಯಾಯಾಲಯದಲ್ಲಿ ನನ್ನ ನಿರ್ದೇಶನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇ. ಕೇ. ಸರಿ ಅದೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು
**ಪ್ರ.ದ.ನ್ಯಾ. ದಂ., ಬನಹಟ್ಟಿ.**